**ಸಾಕ್ಷಿಯನ್ನು ದಿನಾಂಕ 26.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನೋಟೀಸಿನಲ್ಲಿ, ಪಿರ್ಯಾದಿಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಆರೋಪಿ ನನಗೆ ಸುಮಾರು 15-16ವರ್ಷಗಳಿಂದ ಪರಿಚಯ. ಆರೋಪಿ ನನಗೆ 15-16ವರ್ಷಗಳಿಂದ ಪರಿಚಯ ಎಂದು ನನ್ನ ಪಿರ್ಯಾದಿಯಲ್ಲಿ ಆಗಲೀ ಹಾಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆಗಲೀ ಹೇಳಿ ಬರೆಸಿಲ್ಲ. ಈ ಪ್ರಕರಣದಲ್ಲಿ ಹೇಳಿರುವಂತಹ ವ್ಯವಹಾರ ಬಿಟ್ಟು ಅದಕ್ಕಿಂತ ಪೂರ್ವದಲ್ಲಿ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ.

2. ಆರೋಪಿಯು 2022ರ ಫೆಬ್ರವರಿಯಲ್ಲಿ ನನಗೆ ಹಣವನ್ನು ಕೇಳಿರುತ್ತಾರೆ. ಆರೋಪಿಗೆ ನಾನು 2022ರ ಫೆಬ್ರವರಿ 15-16ರ ದಿನಾಂಕದಂದು ಹಣವನ್ನು ಕೊಟ್ಟೆ. ಹಣವನ್ನು ನಮ್ಮ ಮನೆಯಲ್ಲಿ ಆರೋಪಿಗೆ ಕೊಟ್ಟೆ. ಹಣವನ್ನು ಕೊಡುವ ಸಮಯದಲ್ಲಿ ಮನೆಯಲ್ಲಿ ಯಾರೂ ಇರಲಿಲ್ಲ. ನಾನು ಏರ್ ಪೋರ್ಟ್‌ನಲ್ಲಿ ಡ್ರೈವರ್ ಆಗಿ ಕೆಲಸ ಮಾಡುತ್ತೇನೆ. ನಾನು ಸಂಬಳದಲ್ಲಿ ಉಳಿತಾಯ ಮಾಡಿರುವಂತಹ ಹಣದಿಂದ ಆರೋಪಿಗೆ ದುಡ್ಡು ಕೊಟ್ಟೆ. ನಾನು ಸದರಿ ಹಣವನ್ನು ಡ್ರಾ ಮಾನೆಯಲ್ಲಿ ಇಟ್ಟಿದ್ದೆ ಎಂಬುದರ ಬಗ್ಗೆ ಆಗಲೀ ಅಥವಾ ನಾನು ಅಷ್ಟು ಹಣವನ್ನು ಉಳಿತಾಯ ಮಾಡಿಕೊಂಡು ಇಟ್ಟುಕೊಂಡಿದ್ದೆ ಎಂಬುದರ ಬಗ್ಗೆ ಆಗಲೀ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

3. ನನಗೆ ತಿಂಗಳಿಗೆ ರೂ.30,000/- ಸಂಬಳ ಮತ್ತು ಒಟಿ ಮಾಡಿದರೆ ಹೆಚ್ಚಾಗಿ ಹಣ ಬರುತ್ತದೆ. ನನಗೆ ರೂ.30,000/- ಸಂಬಳ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿಲ್ಲ. ನಾನು ಉಳಿತಾಯ ಮಾಡಿರುವಂತಹ ಹಣವನ್ನು ಆರೋಪಿಗೆ ಕೊಟ್ಟೆ ಎಂಬುದರ ಬಗ್ಗೆ ಎಲ್ಲೂ ತಿಳಿಸಿಲ್ಲ. ಆರೋಪಿಯ ತಾಯಿಯ ಹೆಸರು ಗೊತ್ತಿಲ್ಲ. ಆರೋಪಿಗೆ ಹಣವನ್ನು ಕೊಟ್ಟಾಗ ಅವರಿಂದ ಲೋನ್ ಅಗ್ರಿಮೆಂಟ್ ಆಗಲೀ ಅಥವಾ ಪ್ರಾಮಿಸರಿ ನೋಟಾಗಲೀ ಬರೆದು ಕೊಟ್ಟಿಲ್ಲ, ಆದರೆ ಅವರು ಚೆಕ್ ಅನ್ನು ಕೊಟ್ಟರು. ನನಗೆ ಬಾಡಿಗೆ ಬರುತ್ತದೆ ಎಂಬುದನ್ನು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಕೊಟ್ಟಿಲ್ಲ.

4. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ಆರೋಪಿಗೆ ರೂ.3,84,000/- ನಗದಾಗಿ ಮತ್ತು ರೂ.1,16,000/- ಫೋನ್ ಪೇ ಮುಖಾಂತರ ಕೊಟ್ಟೆ ಎಂಬುದಕ್ಕೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ. ಫೋನ್ ಪೇ ಮುಖಾಂತರ ಕೊಟ್ಟಿರುವ ದಾಖಲೆಯನ್ನು ಮುಂದಿನ ದಿನಾಂಕದಲ್ಲಿ ಕೊಡಬಲ್ಲೆ. ಆರೋಪಿಯು ಹಣವನ್ನು ಪಡೆದಾಗ

ನನಗೆ ಖಾಲಿ ಚೆಕ್ ಅನ್ನು ಕೊಟ್ಟರು ಎಂದರೆ ಸರಿಯಲ್ಲ, ತುಂಬಿಸಿಕೊಟ್ಟರು ಎಂದು ನುಡಿದಿರುತ್ತಾರೆ. ಆರೋಪಿಯ ಸಹಿಯ ಶಾಯಿಗೂ ಮತ್ತು ಇತರ ಒಕ್ಕಣೆಗಳ ಶಾಯಿಗೂ ವ್ಯತ್ಯಾಸ ಇದೆ ಎಂದರೆ ಹೌದು. ನಿ.ಪಿ.1 ಖಾಲಿ ಚೆಕ್ ಅನ್ನು ಭದ್ರತೆಗಾಗಿ 2022ರಂದು ಆರೋಪಿ ಕೊಟ್ಟಿದ್ದು ಅದರಲ್ಲಿ ನಾನು ಒಕ್ಕಣೆಗಳನ್ನು ನನ್ನ ಸ್ವಅಕ್ಷರಗಳಲ್ಲಿ ಬರೆದುಕೊಂಡಿದ್ದೇನೆ ಎಂದರೆ ಸುಳ್ಳು. ಚೆಕ್ ಅನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ಪಡೆದಿಲ್ಲ. ನಿ.ಪಿ.1 ಚೆಕ್ 2022ರಿಂದ 2024ರವರೆಗೂ ನನ್ನ ಬಳಿಯೇ ಇತ್ತು ಎಂದರೆ ಹೌದು.

5. ಚೆಕ್ ಅನ್ನು ನಗದೀಕರಣಕ್ಕೆ ಸಲ್ಲಿಸುವ ಮೊದಲು ಆರೋಪಿಗೆ ತಿಳಿಸಿಲ್ಲ ಏಕೆಂದರೆ ಅವರು ನನ್ನ ಪೋನನ್ನು ಸ್ವೀಕರಿಸಿಲ್ಲ. ಚೆಕ್ ಅನ್ನು ನಗದೀಕರಣಕ್ಕೆ ಹಾಕಿಕೊಳ್ಳುವ ಪೂರ್ವದಲ್ಲಿ ಆರೋಪಿಗೆ ನೀನು ಹಣವನ್ನು ಕೊಡುತ್ತಿಲ್ಲ ಮತ್ತು ನನ್ನ ಪೋನನ್ನು ಸಹ ಸ್ವೀಕರಿಸುತ್ತಿಲ್ಲ ಎಂದು ಯಾವುದೇ ನೋಟೀಸು ಕೊಟ್ಟಿಲ್ಲ.

6. ಶಶಿ ಅವರು ನನ್ನ ಮತ್ತು ಆರೋಪಿಯ ಕಾಮನ್ ಫ್ರೆಂಡ್. ನಾನು ಮೂರು ಜನ ಕಾಮನ್ ಫ್ರೆಂಡ್ ಆಗಿರುವ ಕಾರಣ ಎಲ್ಲರೂ ಒಬ್ಬರಿಗೊಬ್ಬರು ತಿಳಿಸಿ ವ್ಯವಹಾರ ಮಾಡುವುದು ಎಂದರೆ ಸುಳ್ಳು. ನಾವೆಲ್ಲರೂ ಪ್ರತ್ಯೇಕವಾಗಿ ವ್ಯವಹಾರಗಳನ್ನು ಮಾಡುತ್ತೇವೆ. ಆರೋಪಿ ಸುಮಾರು ಐದು ಸಾವಿರ ಪೋನ್ ಪೇ ವಾಪಸ್ಸು ಕೊಟ್ಟಿದ್ದಾರೆ. ಆರೋಪಿಯಿಂದ ರೂ.1,36,000/- ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಕಡೆಯಿಂದ ಶಶಿ ಅವರು ನನ್ನ ಬಾಬತ್ತು ರೂ.50,000/- ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ನಾನು ನೀಡಿರುವಂತಹ ನೋಟೀಸಿಗೆ ಪ್ರತಿ ಉತ್ತರವನ್ನು ನೀಡಿ ನೀವು ಹೇಳಿರುವ ರೀತಿ ನಿಮ್ಮ ಹಣವನ್ನು ಶಶಿ ಅವರಿಗೆ ನೀಡಿರುತ್ತೇನೆ ಎಂದು ತಿಳಿಸಿದ್ದಾರೆ ಎಂದರೆ ನನ್ನ ಹಣವನ್ನು ಶಶಿ ಅವರಿಗೆ ಕೊಟ್ಟರೆ ಹೇಗೆ ಎಂದು ನುಡಿದಿರುತ್ತಾರೆ.

7. ಆರೋಪಿಯು ಎರಡು ಲಕ್ಷ ಹಣವನ್ನು ಪಡೆದಾಗ ಭದ್ರತೆಗಾಗಿ ನಿ.ಪಿ.1 ಖಾಲಿ ಚೆಕ್ ಅನ್ನು ನೀಡಿದ್ದು ಅದನ್ನು ನಾನು ಐದು ಲಕ್ಷಕ್ಕೆ ಬರೆದುಕೊಂಡಿದ್ದೇನೆ ಎಂದರೆ ಸುಳ್ಳು. ಪ್ರತಿ ಉತ್ತರದಲ್ಲಿ ಆರೋಪಿಯು ಈಗಾಗಲೇ ರೂ.1,36,000/- ನೀಡಿದ್ದು ಇನ್ನುಳಿದ ಹಣವನ್ನು ರೂ.64,000/- ಹಣವನ್ನು ನೀಡಲು ತಯಾರಿದ್ದಾರೆ ಎಂದರೆ ಸುಳ್ಳು. ಆರೋಪಿಯು ನನ್ನ ಬಳಿ ಐದು ಲಕ್ಷ ಹಣ ಪಡೆದಿಲ್ಲ, ಭದ್ರತೆಗಾಗಿ ನೀಡಿದ್ದಂತಹ ನಿ.ಪಿ.1 ಚೆಕ್ ಅನ್ನು ನಾನು ದುರುಪಯೋಗಪಡಿಸಿಕೊಂಡು ಈ ಪ್ರಕರಣ ಹಾಕಿದ್ದೇನೆ ಎಂರದೆ ಸುಳ್ಳು.

8. ಆರೋಪಿ ಕೊಟ್ಟಿದ್ದಂತಹ ರಿಪ್ಲೈ ನೋಟೀಸಿಗೆ ನಾನು ಯಾವುದೇ ರಿ- ಜಾಯಿಂಡರ್ ಕೊಟ್ಟಿಲ್ಲ. ಆರೋಪಿ ನನ್ನಿಂದ ಯಾವುದೇ ಐದು ಲಕ್ಷ ಹಣವನ್ನು ಪಡೆದಿಲ್ಲ ಆದರೂ ನಾನು

ನ್ಯಾಯಾಲಯದ ಮುಂದೆ ಬಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**